ದಿನಾಂಕ 06.12.2018 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಮ್.ಎ.ಜೆ. ವಕೀಲರಿಂದ

4-5 ವರ್ಷಗಳಿಂದ ಬಿಜಾಪೂರದಲ್ಲಿ ವಾಸಿಸುತ್ತಿದ್ದು, ಬಾರ್ ಮ್ಯಾನೇಜರ ಎಂದು ಕೆಲಸ ಮಾಡುತ್ತಿದ್ದೇನೆ. ನನ್ನ ತಂದೆಯು ಸಹ ಬಿಜಾಪೂರದಲ್ಲಿ ಪ್ರತ್ಯಕವಾಗಿರುತ್ತಾರೆ. 2003 ರಲ್ಲಿ ನನ್ನ ಬಳಿ ಬ್ಯಾಂಕ ಬ್ಯಾಲೆನ್ಸ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ನೀಡಿಲ್ಲ. 1986 ರಲ್ಲಿ ನನ್ನ ಮದುವೆಯಾಗಿದ್ದು, ನನಗೆ 3 ಜನ ಮಕ್ಕಳು. ದಾವಾ ಆಸ್ತಿ ಹೊರತುಪಡಿಸಿ ನನಗೆ ಮೊದಲು ಯಾವುದೇ ಆಸ್ತಿ ಇರಲಿಲ್ಲ. ದಾವೆಯನ್ನು 10-ಎಕರೆ ಸಲುವಾಗಿ ಮಾತ್ರ ಸಲ್ಲಿಸಿದ್ದು, ನನ್ನ ಹೆಸರಿನಲ್ಲಿ ಇದ್ದ 5-ಎಕರೆ ಆಸ್ತಿಯ ಕುರಿತು ತಿಳಿಸಿಲ್ಲ.

ನಮ್ಮ ಅಜ್ಜನ ಕಾಲದ ಒಂದು ಮನೆ ಕೂಡಾ ಗ್ರಾಮದಲ್ಲಿ ಇದೆ. ಸದರಿ ಮನೆಯಲ್ಲಿ ಹಿಸ್ಸೆಯಾಗಿಲ್ಲ. ಹಿಸ್ಸೆ ಕೇಳಿ ನಾನು ದಾವೆ ಸಲ್ಲಿಸಿಲ್ಲ. ನನ್ನ ತಂದೆ ಸಂಪಾದಿಸಿದ ಅಷ್ಟು ಹಣವನ್ನು ಹಿರಿಯ ಮಗನೆಂದು ಇರುತ್ತೇನೆಂದು ನನ್ನ ಬಳಿ ನೀಡುತ್ತಿದ್ದ ಎಂದರೆ ಸರಿಯಲ್ಲ. ಅದು ಅಲ್ಲದೇ ನನ್ನ ತಂದೆ ಖರ್ಚಿಗೆಂದು ನನ್ನ ತಾಯಿಗೂ ಸಹ ಹಣ ನೀಡುತ್ತಿದ್ದ ಎಂದರೆ ಸರಿಯಲ್ಲ. ದಾವಾ ಜಮೀನನ್ನು ಖರೀದಿಸುವ ಸಲುವಾಗಿ ನನ್ನ ತಂದೆಯ ಬಳಿ ಹಣ ಪಡೆದಿರುತ್ತೇನೆಂದರೆ ಸರಿಯಲ್ಲ. ತಾಯಿಯ ಜೀವನಾಂಶಕ್ಕೆ ಅನುಕೂಲವಾಗಲೆಂದು ನನ್ನ ತಂದೆ ಅವಳ ಹೆಸರನಲ್ಲಿಯು ಜಮೀನು ಖರೀದಿಸಿರಿ ಎಂದು ತಿಳಿಸಿದ್ದ ಎಂದರೆ ಸರಿಯಲ್ಲ. ಸದರಿ ನನ್ನ ತಂದೆಯ ಹಣ ದುರುಪಯೋಗ ಪಡೆಸಿಕೊಂಡು ಜಮೀನನ್ನು ನನ್ನ ಹೆಂಡತಿಯ ಹೆಸರಿನಲ್ಲಿ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಜಮೀನು ಖರೀದಿಸಲು ಬೇಕಾದ ಹಣವನ್ನು ಎಲ್ಲಿಂದ ಸಂಗ್ರಹಿಸಿರುತ್ತೇವೆಂದು ಬರೆದಿಲ್ಲ ಎಂದರೆ ಸರಿ. ದಾವಾ ಆಸ್ತಿ ಖರೀದಿಸಲು ನನ್ನ

ತಂದೆಯೇ ಹಣ ನೀಡಿದ ಕಾರಣ ಅದು ಆತನ ಜಮೀನು ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿನಲ್ಲಿ ಖರೀದಿಸಿದ ಹಣದ ಕುರಿತು ದಾಖಲಾತಿ ಸಲ್ಲಿಸಿಲ್ಲ. ದಾವಾ ಆಸ್ತಿಯನ್ನು ಖರೀದಿಸಲು ನಮ್ಮ ಅಳಿಯನ ಕಡೆ ಹಣಕಾಸಿನ ಸಹಾಯ ಪಡೆದ ಬಗ್ಗೆ ದಾಖಲಾತಿ ನೀಡಿಲ್ಲ.

ಖರೀದಿ ಪತ್ರದ ಪ್ರಕಾರ ದಾವಾ ಆಸ್ತಿಗೆ ನನ್ನ ತಾಯಿ ಮಾಲಿಕಳು ಎಂದರೆ ಸರಿಯಲ್ಲ. ನನ್ನ ಹಾಗೂ 1 ನೇ ಪ್ರತಿವಾದಿಯ ನಡುವೆ 5-ಎಕರೆ ಜಮೀನಿನ ಕುರಿತು ಮಾತ್ರ ವ್ಯಾಜ್ಯವಿದೆ. ದಾವಾ ಆಸ್ತಿ ಖರೀದಿಸಿದ ದಿನದಿಂದ ಅವಳು ಮೃತ ಹೊಂದುವವರೆಗೂ ಆಸ್ತಿಯ ಕಂದಾಯ ದಾಖಲೆಗಳು ಅವಳ ಹೆಸರಿನಲ್ಲಿಯೇ ಇದ್ದವು. ಹಿಂದೂ ಕಾಯ್ದೆ ಪ್ರಕಾರ ಮಹಿಳೆ ಹೆಸರಿನಲ್ಲಿ ಇದ್ದ ಆಸ್ತಿ ಅದು ಅವಳ ಸಂಪೂರ್ಣ ಮಾಲಿಕತ್ವದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. 2003 ರಲ್ಲಿ ನನ್ನ ತಾಯಿಯ ಹೆಸರಿನಲ್ಲಿ ದಾವಾ ಆಸ್ತಿ ಖರೀದಿಸಿದ್ದರಿಂದ ಅವಳೆ ಮಾಲಿಕಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಖರೀದಿಸಿದ 3 ವರ್ಷದಲ್ಲಿ ಆಸ್ತಿಯನ್ನು ಖರೀದಿಸಲು ನಾನು ಹಣ ಹೂಡಿರುತ್ತೇನೆಂದು ನನ್ನ ತಾಯಿಯ ವಿರುದ್ದ ದಾವೆ ಸಲ್ಲಿಸಿಲ್ಲ.

ಸದರಿ ಖರೀದಿ ಪತ್ರ ನಾಮ ಮಾತ್ರಕ್ಕೆ ನನ್ನ ತಾಯಿಯ ಹೆಸರಿನಲ್ಲಿದೆ ಕಾರಣ ಅದನ್ನು ಶೂನ್ಯವೆಂದು ಪರಿಗಣಿಸಬೇಕೆಂದು ನ್ಯಾಯಾಲಯಕ್ಕೆ ವಿನಂತಿಸಿಲ್ಲ ಎಂದರೆ ಸರಿ. ಗ್ರಾಮದ ಮನೆ ಹಾಗೂ ನನ್ನ ಹೆಸರಿನಲ್ಲಿ 5-ಎಕರೆ ಮತ್ತು ನನ್ನ ಹೆಂಡತಿ ಹೆಸರನಲ್ಲಿ 5-ಎಕರೆ ಜಮೀನು ಕಬ್ಜಾ ಮಾಡಿಕೊಂಡಿದ್ದರಿಂದ ತಾಯಿ ಹೆಸರನಲ್ಲಿರುವ 5-ಎಕರೆ ಜಮೀನನ್ನು ಗ್ರಾಮದ ಹಿರಿಯರು ಸೇರಿ ನನ್ನ ತಾಯಿಯ ಮನವೊಲಿಸಿ 1 ನೇ ಪ್ರತಿವಾದಿಗೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ03.09.2014 ರಂದು ಆದ ವಾಟ್ನಿ ಪತ್ರಕ್ಕೆ ನನ್ನ ತಂದೆ-ತಾಯಿ ಹಾಗೂ ಹಿರಿಯರಾದ ಶಿವರುದ್ರಪ್ಪ ತಂದೆ ಗುರುಸಿದ್ದಪ್ಪ ಅವಟಿ ಮತ್ತು ಇನ್ನೂ ಇಬ್ಬರು ಸಾಕ್ಷಿದಾರರ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿ ಕುರಿತು ಆದ ಮುಟೇಶನ ಆದೇಶದ ಮೇಲೆ ಕಂದಾಯ ಅಪೀಲು ಸಲ್ಲಿಸಿಲ್ಲ. ಪ್ರಕರಣ ದಾಖಲಿಸಿದ ನಂತರ 1 ನೇ ಪ್ರತಿವಾದಿ ಜೊತೆ ಮಾತು ಬಿಟ್ಟಿರುತ್ತೇನೆ. ಆಸ್ತಿಯ ಹಕ್ಕುಬದಲಾವಣೆ ಕುರಿತು ಕಂದಾಯ ಇಲಾಖೆಗಳಿಗೆ ಅರ್ಜಿ ನೀಡಿದರೂ ಸಹ

ಅವರು ಕ್ರಮ ಕೈಗೊಂಡಿಲ್ಲದ ಕಾರಣ ದಾವೆ ಸಲ್ಲಿಸಿರುತ್ತೇನೆ ಎಂದು ಮತ್ತು ಸದರಿ ದಾವೆಗೆ ಕಾರಣವಾಗಿರುತ್ತದೆ ಎಂದು ತಿಳಿಸಿರುತ್ತೇನೆ. ನನ್ನ ತಾಯಿ ಬರೆದುಕೊಟ್ಟ ವಾಟ್ನಿಪತ್ರ ಹಾಗೂ ಕಂದಾಯ ದಾಖಲೆಗಳ ಅಡಿಯಲ್ಲಿ 1 ನೇ ಪ್ರತಿವಾದಿ ದಾವಾ ಆಸ್ತಿಯ ಕಬ್ಜೆಯಲ್ಲಿರುತ್ತಾನೆ ಎಂದರೆ ಸಾಕ್ಷಿ ನನ್ನ ತಾಯಿಗೆ ಹುಶಾರಿಲ್ಲದಿರುವಾಗ ಕಾಗದ ಪತ್ರ ಮಾಡಿಕೊಂಡು ನಂತರ ಕಬ್ಜಾ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾನೆ. ದಾವಾ ಆಸ್ತಿಗೆ 1 ನೇ ಪ್ರತಿವಾದಿ ಮಾಲಿಕನಿರುವದರಿಂದ ದಾವೆಯನ್ನು ಸಲ್ಲಿಸುವ ಕಾರಣ ನನಗೆ ಉಂಟಾಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಅಫಜಲಪೂರ